XII. ಹೊನ್ನಾವರ ಪುರಸಭೆಯ ಸರಹದ್ದಿನಲ್ಲಿ ನೀರಿನ ತೀವ್ರ ಕೊರತೆ ಇರುವ ಬಗ್ಗೆ

ಶ್ರೀ ಆರ್ ಎನ್. ನಾಯಕ್ —ಮಾನ್ಯ ಅಧ್ಯಕ್ಷರೇ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಪುರಸಭೆಯ ಸರಹದ್ದಿನಲ್ಲಿ ನೀರು ಸರಬರಾಜು ಮಾಡುವಲ್ಲಿ ತೀವ್ರ ಕೊರತೆಯುಂಟಾಗಿದೆ. ಕೇವಲ ಎರಡೇ ಬೋರ್‌ವೆಲ್‌ನಿಂದ ಇಡೀ ಪಟ್ಟಣಕ್ಕೆ ನೀರು ಸರಬರಾಜು ಆಗಬೇಕಾಗಿದೆ. ಅದು ಅಸಾಧ್ಯವಾದ ಕೆಲಸ. ನಗರಾಭಿವೃದ್ಧಿ ಮಂತ್ರಿಗಳು ಸಿರ್ಸಿಗೆ ಬಂದಾಗ ಸಂಪೂರ್ಣ ಮಾಹಿತಿಯನ್ನು ಅವರಿಗೆ ಪುರಸಭೆಯ ಅಧ್ಯಕ್ಷರು ನೀಡಿದ್ದಾರೆ. ತೊಂದರೆಯನ್ನು ಪರಿಹರಿಸುವ ಬಗ್ಗೆ ಭರವಸೆ ನೀಡಿದ ಮಂತ್ರಿಗಳು ಈತನಕ ಏನು ಕ್ರಮ ಕೈಗೊಂಡಿದ್ದಾರೆನ್ನುವುದು ಗೊತ್ತಾಗಿಲ್ಲ. ನೀರಿನ ಕೊರತೆಯ ವಿಚಾರ ಉತ್ತರ ಕನ್ನಡ ಜಿಲ್ಲೆಯಲ್ಲಿಯ ಡಿ.ಸಿ.ಯವರ ಹತ್ತಿರಹಾಕೆ ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಸಹ ನಗರಸಭೆಯ ಅಧ್ಯಕ್ಷರು ಮಾತನಾಡಿದ್ದಾರೆ. ಏನು ಪ್ರಯೋಜನವಾಗಿಲ್ಲ. ಉಳಿದ ಪುರಸಭೆಗಳಲ್ಲಿ ೮-೧೦ ಬೋರ್‌ವೆಲ್‌ಗಳನ್ನು ಉಪಯೋಗಿಸಿ ಕಂಡಿಯುವ ನೀರು ಪೂರೈಸಲಾಗುತ್ತಿದೆ. ಆದರೆ ಹೊನ್ನಾವರಕ್ಕೆ ಈ ಮಲತಾಯಿ ಧೋರಣೆ ಏಕೆ ? ಬಹುಶಃ ನಗರಸಭೆ ಆಡಳಿತ ಬಿ.ಜೆ.ಪಿ.ಪಕ್ಷದವರ ಕೈಲಿದೆ ಎನ್ನುವ ಬಗ್ಗೆ ಈ ಧೋರಣೆ ಇರಬೇಕೆಂದು ಜನರಾಡಿಕೊಳ್ಳುತ್ತಿದ್ದಾರೆ, ಆದುದರಿಂದ ತೀಕ್ಷ್ಣವಾಗಿ ಇನ್ನು ಕೆಲವು ಬೋರ್‌ವೆಲ್‌ಗಳನ್ನು ಹಾಕಿಸಿ ಹೊನ್ನಾವರ ಪುರಸಭೆಗೆ ಸರಿಯಾಗಿ ನೀರು ಸರಬರಾಜಾಗಲಂ ಅನುವು ಮಾಡಿಕೊಡಬೇಕಾಗಿ ಸರಕಾರದ ಗಮನ ಸೆಳೆಯುತ್ತಿದ್ದೆನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ನಮ್ಮದು ಮಲತಾಯಿ ಧೋರಣೆಯಲ್ಲ. ರಾಜಕೀಯ ಪಕ್ಷಗಳು ಯಾವುದೇ ಅಧಿಕಾರದಲ್ಲಿ ಇದ್ದರೂ ಕೂಡಾ ಅದನ್ನು ಗಮನದಲ್ಲಿ ಇಟ್ಟುಕೊಳ್ಳದೇ ನೀರು ಸರಬರಾಜಾಗಲೀ ಅಥವಾ ಬೇರೆ ಏನಾದರೂ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದರೆ ಅದಕ್ಕೆ ಸರ್ಕಾರ ಬದ್ಧವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊನ್ನಾವರ ಪಟ್ಟಣವು ತಾಲ್ಲೂಕಿನ ಕೇಂದ್ರ ಸ್ಥಳ. ೧೯೮೧ರ ಜನಗಣತಿ ಪ್ರಕಾರ ಪಟ್ಟಣದ ಜನಸಂಖ್ಯೆ ೧೫,೧೮೫ ಇದ್ದು, ಈಗಿನ ಜನಸಂಖ್ಯೆ ಸುಮಾರು ೧೭,೦೦೦ ಇದೆ.

೧೯೭೮-೭೯ರಲ್ಲಿ ಪಟ್ಟಣಕ್ಕೆ ಮಂಜೂರಾದ ೧೮.೫೦ ಲಕ್ಷ ರೂಪಾಯಿ ಅಂದಾಜಿನ ಕೆಲಸ ಆಗಲೇ ಪೂರ್ಣಗೊಂಡು, ನೀರು ಸರಬರಾಜು ಪ್ರಾರಂಭಿಸಿ, ಯೋಜನೆ ನಿರ್ವಹಣೆಗಾಗಿ ಪುರಸಭೆಗೆ ಏಪ್ರಿಲ್ ೮೨ರಲ್ಲಿ ಪಹಿಸಿದೆ. ಈ ಯೋಜನೆಯಲ್ಲಿ ೨೦೦೧ನೇ ಇಸವಿಯಲ್ಲಿ ನಿರೀಕ್ಷಿಸಲಾದ ೧೦,೫೦೦ ಜನಸಂಖ್ಯೆಗೆ ತಲಾ ೧೦ ಗ್ಯಾಲನ್ ನೀರನ್ನು ದಿನಂಪ್ರತಿ ಒದಗಿಸಲು ಯೋಜಿಸಲಾಗಿತ್ತು. ಈ ಯೋಜನೆಯಲ್ಲಿ ಮೂರು ಕೊಳವೆ ಬಾವಿಗಳಿಂದ ದಿನಂಪ್ರತಿ ೨,೮೫,೯೦೦ ಗ್ಯಾಲನ್ನು ನೀರನ್ನು ೧೭-೮೮ ತಾಸುಗಳಲ್ಲಿ ಸಂಗ್ರಹಿಸಿ ಪಟ್ಟಣಕ್ಕೆ ಸರಬರಾಜು ಮಾಡಲು ಯೋಜಿಸಲಾಗಿತ್ತು. ಆದರೆ, ವಿತರಣಾ ವ್ಯವಸ್ಥೆಯನ್ನು ೨೫ ಗ್ಯಾಲನ್ ನೀರು ಪೂರೈಕೆಯಾಗುವ ಮಟ್ಟಕ್ಕೆ ಯೋಜಿಸಲಾಗಿದೆ. ಆದರಂತೆ ಕಾರ್ಯಗತಗೊಳಿಸಲಾಗಿದೆ.

ಈಗಿನ ಪರಿಸ್ಥಿತಿ ಪ್ರಕಾರ ಪಟ್ಟಣಕ್ಕೆ ಎರಡು ಕೊಳವೆ ಬಾವಿಗಳಿಗೆ ಜೋಡಿಸಲಾಗಿರುವ ಯಂತ್ರ ಚಾಲಿತ ಪಂಪ್‌ಗಳಿಂದ ನೀರನ್ನು ತೊಟ್ಟಿಗೆ ಪಂಪ್ ಮಾಡಿ, ತಲಾ ದಿನಂಪ್ರತಿ ೧೦ ಗ್ಯಾಲನ್‌ನಂತೆ ಸರಬರಾಜು ಮಾಡಲಾಗುತ್ತಿದೆ. ಒಂದು ಕೊಳವೆ ಬಾವಿಯಲ್ಲಿ ಗಂಟೆಗೆ ೬೮೦೦ ಗ್ಯಾಲನ್ ಮತ್ತು ಇನ್ನೊಂದರಲ್ಲಿ ೩೦೦೦ ಗ್ಯಾಲನ್ ನೀರು ಪೂರೈಕೆಯಾಗುತ್ತಿದೆ. ೩ನೇ ಕೊಳವೆ ಬಾವಿ ಉಪ್ಪು ನೀರಾಗಿದ್ದು (ಚರ್ಜ್‌ರೋಡ್) ಅದನ್ನು ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಉಪಯೋಗಿಸಲಾಗುತ್ತಿದೆ.

ಇದಲ್ಲದೆ ೯ ಬೇರೆ ಕೊಳವೆ ಬಾವಿಗಳಿದ್ದು ಆದರಲ್ಲಿ ೫ಕ್ಕೆ ಕೈ ಪಂಪ್ ಹಾಕಲಾಗಿದೆ. ಒಂದಕ್ಕೆ ಪವರ್‌ಪಂಪನ್ನು ಹಾಕಲು ಆರೋಗ್ಯ ಇಲಾಖೆಯವರಿಂದ ೪೦,೦೦೦ ರೂಪಾಯಿಗಳನ್ನು ಪಡೆದು ಪವರ್ ಪಂಪ್ ಹಾಕಲು ಇಷ್ಟರಲ್ಲೇ ಕ್ರಮ ಕೈಗೊಳ್ಳಲಾಗುವುದು. ಇನ್ನೇರಡು ಕೊಳವೆ ಬಾವಿಗಳ ಮಂಚ್ಜೆವೆ ಒಂದು ಉಪ್ಪು ನೀರಾಗಿದೆ ಈ ಪಟ್ಟಣಕ್ಕೆ ಒಟ್ಟು ಸುಮಾರು ೦.೭೦ ಲಕ್ಷ ಗ್ಯಾಲನ್ ನೀರು ಪೂರೈಕೆಯಾಗುತ್ತಿದ್ದು ಇದರಿಂದ ದಿನಕ್ಕೆ ಸರಾಸರಿ ಸರಬರಾಜು ತಲಾ ೧೦ ಗ್ಯಾಲನ್ ಆಗುತ್ತಿದೆ.

ಕುಮಟಾ–ಹೊನ್ನಾವರಕ್ಕೆ ಒಂದು ರೀಜನಲ್ ಯೋಜನೆಯನ್ನು ೫.೭೨ ಕೋಟಿ ರೂಪಾಯಿಗಳಿಗೆ ತಯಾರಿಸಲಾಗಿತ್ತು ಅದರಲ್ಲಿ ೧೦ ಗ್ರಾಮಗಳನ್ನು ಸೇರಿಸಿತ್ತು. ಈಗ ಜನಾರೋಗ್ಯ ಇಲಾಖೆಯವರು ೮ ಹಳ್ಳಿಗಳಿಗೆ ನೀರು ಪೂರೈಕೆಗೆ ಯೋಜಿಸಿದ್ದಾರೆ, ಎರಡನ್ನು ಕೈ ಬಿಟ್ಟಿದ್ದಾರೆ. ಈಗ ರೀಜನಲ್ ಯೋಜನೆಯನ್ನು ಪುನರ್ ವಿಮರ್ಶಿಸಿ ಅಂದಾಜು ತಯಾರಿಸಲಾಗುತ್ತಿದೆ.

ಮೇಲಿನ ಯೋಜನೆಯು ಕಾರ್ಯಗತವಾಗುವುದರಲ್ಲಿ ವೇಳೆ ಹಿಡಿಯುವುದರಿಂದ ಹೊನ್ನಾವರ ಪಟ್ಟಣಕ್ಕೆ ೩೦ ಲಕ್ಷ ರೂ.ಗಳ ಒಂದು ಅಭಿವೃದ್ಧಿ ಯೋಜನೆಯನ್ನು ಏಳನೇ ಯೋಜನಾ ಪಟ್ಟಿಯಲ್ಲಿ ಸೇರಿಸಲಾಗಿದೆ. ಆದಷ್ಟು ತೀವ್ರವಾಗಿ ಈ ಯೋಜನೆಯನ್ನು ಕೈಗೊಳ್ಳಲಾಗುವುದು.

ಅಲ್ಲದೆ ಮಂಬರುವ ಬೇಸಿಗೆಯಲ್ಲಿ ಇನ್ನೂ ೪ ಕೊಳವೆ ಬಾವಿಗಳನ್ನು ತೋಡಿ, ಅವುಗಳಿಗೆ ಕೈಪಂಪ್ ಜೋಡಿಸಲು ನಿರ್ದೇಶಿಸಿದ್ದು, ಸರ್ಕಾರಕ್ಕೆ ದಿನಾಂಕ ೩೧ನೇ ಡಿಸೆಂಬರ್ ೧೯೮೫ ರಂದು ಸಲ್ಲಿಸಿರುವ ೪೧೯ ಲಕ್ಷ ರೂ.ಗಳ ಪ್ರಸ್ತಾವನೆಯಲ್ಲಿ ಈ ಪಟ್ಟಣಕ್ಕೆ ೮೦ ಸಾವಿರ ರೂ.ಗಳನ್ನು ಕೇಳಿದೆ. ಸರ್ಕಾರದ ಆಜ್ಞೆ ಬಂದೊಡನೆ ಮಂಡಲಿಯು ಮುಂದಿನ ಕ್ರಮ ಕೈಗೊಳ್ಳುವುದು.

XIII ಕುಂದಾಪುರ ತಾಲ್ಲೂಕಿನ ಅನಗಳ್ಳಿ ಗ್ರಾಮದ ಸರ್ವೆ ನಂ. ೧೩೪ರಲ್ಲಿ ಇರುವ ಸಣ್ಣ ತೋಡನ್ನು ದುರಸ್ಥಿ ಪಡಿಸುವ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಅನಗಳ್ಳಿ ಗ್ರಾಮದ ಸರ್ವೆ ನಂಬರ್ ೧೩೪ರಲ್ಲಿ ೭ ಮತ್ತು ೧೦ನೇ ಸ್ಥಳವು ಹಾಗೂ ಇತರ ೫೦ ಎಕರೆ ಸ್ಥಳವು ತಗ್ಗು ಪ್ರದೇಶವಾಗಿದ್ದು, ಸಣ್ಣ ತೋಡಿನ ಮುಖಾಂತರ ಹೊಳೆಗೆ ನೀರು ಹರಿದು ಹೋಗುತ್ತಿದ್ದು ಮೇಲೆ ಹೇಳಿದ ತೋಡು ನಾವದ ರಸ್ತೆಯಲ್ಲಿರುವ ಪ್ರಯುಕ್ತ ನೀರು ಸರಿಯಾಗಿ ಹರಿದು ಹೋಗದೆ ಬೇಸಾಯ ಮಂಳಂಗಡೆಯಾಗಿ ಕೆಲವು ವರ್ಷಗಳಿಂದ ಪೈರು ಕೊಳೆತು ಹೋಗುತ್ತಿದೆ. ಆದ್ದರಿಂದ ಸದರಿ ತೋಡನ್ನು ಶಾಶ್ವತವಾದ ರೀತಿಯಲ್ಲಿ ರಿವಿಟ್‌ಮೆಂಟ್ ಮಾಡಿ ಸರಿಪಡಿಸಬೇಕೆಂದು ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ವಿವರಣೆ ಇಲ್ಲ. ಅದನ್ನು ತರಿಸಿ ನಿರ್ಣಯ ಮಾಡಬೇಕಾಗುತ್ತದೆ.

MR. SPEAKER.—Now I read rule 330, which says thus.

"The Speaker may, direct any member whose conduct is, in his opinion grossly, disorderly to with draw immediately from the House, and any Member so ordered to withdraw shall do so forthwith and shall absent himself during the remainder of the days sittings".

(Interruption)

ಆದರೂ ತಾವು ಬಂದಿದ್ದೀರಿ. ನಿಮಗೆ ನಾನು ಕ್ಷಮಾಧಾನ ಮಾಡಿದ್ದೇನೆ. ನೀವೀಗ ನಿಯಮ ೩೩೪ನ್ನು ಓದಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಕಾರ್ಯಕಲಾಪಗಳ ವರದಿ ತರಿಸಿಕೊಡಿ. ನಾನು ನಿಮಗೆ ಅಗೌರವ ತೋರಿಸಿಲ್ಲ. ಸರ್ಕಾರದ ನೀತಿಯನ್ನು ಪ್ರತಿಭಟಿಸುತ್ತಿದ್ದೇನೆ. ಅಷ್ಟೇ ಸ್ವಾಮಿ.

ಅಧ್ಯಕ್ಷರು.—ನಿಯಮ ೩೩೪ರ ರೀತ್ಯಾ ನೀವು ಕೊಟ್ಟಿರುವಕ್ಕೆ ವಿಷಯವನ್ನು ಓದಿ.

XIV ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮಂಗನ ಕಾಯಿಲೆ ತೀವ್ರ ಗೊಂಡಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಮಂಗನ ಕಾಯಿಲೆ ತೀವ್ರ ಸ್ವರೂಪಕ್ಕೆ ಹೋಗಿದ್ದು ಪ್ರತಿ ನಿತ್ಯ ನೂರಾರು ಜನ ಈ ರೋಗಕ್ಕೆ